ಇ) ನೋಂದಣಿ ಆಗದೇ ಇರುವ ಘಟಕಗಳನ್ನು ನೋಂದಾಯಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಯಂತ್ರೋಪಕರಣ ಮತ್ತು ಘಟಕವನ್ನೊಳಗೊಂಡಂತೆ ರೂ. 100.00 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬಂಡವಾಳ ಹೂಡಿರುವ ಕೈಗಾರಿಕಾ ಘಟಕಗಳನ್ನು ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳೆಂದು ಪರಿಗಣಿಸಲಾಗುವುದು.

ಆ) ಬಿಜಾಪುರ ಜಿಲ್ಲೆಯಲ್ಲಿ 5124 ಘಟಕಗಳು ನೋಂದಣಿಯಾಗಿರುತ್ತದೆ. ನೋಂದಾಯಿಸದೇ ಇರುವ ಘಟಕಗಳ ಮಾಹಿತಿ ಲಭ್ಯವಿರುವುದಿಲ್ಲ.

ಇ) ಅಂತಹ ಕೈಗಾರಿಕೆಗಳನ್ನು ನೋಂದಣಿ ಮಾಡುವುದು ಕಡ್ಡಾಯವಾಗಿರುವುದಿಲ್ಲ ಆದಾಗ್ಯೂ ನೋಂದಾಯಿಸದೇ ಇರುವ ಘಟಕಗಳ ಕುರಿತಂತೆ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ

3125 (3441) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿಗಳನ್ನು ಅವರವರ ಜನ ಸಮುದಾಯಗಳ ಜನಸಂಖ್ಯೆಗನುಗುಣವಾಗಿ ವರ್ಗೀಕರಿಸಿ ರಾಜಕೀಯ, ಆಡಳಿತ, ಶಿಕ್ಷಣ, ಆರ್ಥಿಕ ಸೌಲಭ್ಯಗಳನ್ನು ಪಂಜಾಬ, ಹರಿಯಾಣ, ಉತ್ತರ ಕನ್ನಡ ಮತ್ತು ಆಂಧ್ರ ಸರ್ಕಾರಗಳು ನೀಡಿ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಿ ಸಂವಿಧಾನ ದತ್ತವಾದ ಸಾಮಾಜಿಕ ನ್ಯಾಯ ಜಾರಿಯಲ್ಲಿ ತಂದಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

ಆ) ಇದೇ ರೀತಿಯ ಒಳಮೀಸಲಾತಿಗೆ ಆಗ್ರಹಿಸಿ, ಕರ್ನಾಟಕದ ಮಾದಿಗ ಜನಾಂಗದ ಜನತೆ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಮೂಲಕ ಕಳೆದ 5 ವರ್ಷಗಳಿಂದ ಹೋರಾಟ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಕರ್ನಾಟಕ ಸರ್ಕಾರ ಕೂಡ ಪರಿಶಿಷ್ಟರ ಜನಸಂಖ್ಯೆಗನುಗುಣವಾಗಿ ಮಿಸಲಾತಿ ತರಲು ಉದ್ದೇಶಿಸಿದೆಯೇ? ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಈ ಬಗ್ಗೆ ಕೋರಿಕೆ, ಸದರಿ ಜನಾಂಗದಿಂದ ಬಂದಿದೆ.

ಇ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಪರಿಶಿಷ್ಟ ಜಾತಿಗಳಿಗೆ ಒದಗಿಸಲಾದ ಶೇಕಡ 15ರ ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಉಪಜಾತಿಗಳ ಒಳ ಮೀಸಲಾತಿ ನಿರ್ಧರಿಸುವ ಹಾಗು ಶಿಫಾರಸ್ಸು ಉಪಬಂಧಗಳು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧಿನಿಯಮಗಳಲ್ಲಿರುವುದಿಲ್ಲ.

ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಇಲಾಖೆಯ ಫಲಾನುಭವಿಗಳು

3127 (3451) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪೂರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಗುಲ್ಬರ್ಗ ಜಿಲ್ಲೆಗೆ ಯೋಜನೆಗಳಡಿಯಲ್ಲಿ ಮಂಜೂರಾಗಿರುವ ಬೋರ್‌ವೆಲ್ ಎಷ್ಟು;

ಆ) ಆ ಪೈಕಿ 3 ವರ್ಷಗಳ ಸಾಧನೆಯೊಂದಿಗೆ ಕ್ಷೇತ್ರವಾರು ಆಯ್ಕೆ ಮಾಡಲ್ಪಟ್ಟ ಫಲಾನುಭವಿಗಳ ವಿವರಗಳನ್ನು ಒದಗಿಸುವುದು;

ಇ) ಈ ಯೋಜನೆಗಳಡಿಯಲ್ಲಿ ಇನ್ನೂ ಕೊರೆಯದೆ ಬಾಕಿ ಇರುವ ಕೊಳವೆ ಬಾವಿಗಳೆಷ್ಟು;

ಈ) ಕೊರೆಯದಿರುವುದಕ್ಕೆ ಕಾರಣಗಳೇನು ಹಾಗೂ ಯಾವಾಗ ಕೊರೆಸಲಾಗುತ್ತದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು): ಅ) ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮಂಜೂರಾಗಿದ್ದ ಕೊಳವೆ ಬಾವಿಗಳ ವಿವರಗಳನ್ನು ಈ ಕೆಳಕಂಡಂತಿವೆ.

	2000–01	2001–02	2002–03
ಕರ್ನಾಟಕ ಪರಿಶಿಷ್ಟ ಜಾತಿ / ವರ್ಗಗಳ ಅಭಿವೃದ್ಧಿ ನಿಗಮ	141	175	257
ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	23	41	26
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	11	21	30

ಆ) ವಿವರಗಳನ್ನು ಅನುಬಂಧ–I, 2 ಮತ್ತು 3 ಪಟ್ಟಿ ನೀಡಲಾಗಿದೆ.

ಇ) 2002–03ನೇ ಸಾಲಿನಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 17 ಕೊಳವೆ ಬಾವಿಗಳು ಕೊರೆಯದೇ ಉಳಿದಿರುತ್ತವೆ.

ಈ) 2002–03ನೇ ಸಾಲಿನಲ್ಲಿ ಪಾರದರ್ಶಕ ಅಧಿನಿಯಮಗಳ ರೀತ್ಯಾ ಬಾವಿಗಳನ್ನು ಕೊರೆಯಲು ಮತ್ತು ಪಂಪ್ ಸೆಟ್ಟುಗಳನ್ನು ಸರಬರಾಜಿಗೆ ದರಗಳನ್ನು ಗೊತ್ತುಪಡಿಸಲು ಟೆಂಡರುಗಳನ್ನು ಕರೆಯಲಾಗಿದೆ. ಈ ಹಿನ್ನೆಲೆಯಲ್ಲಿ ಏಜೆನ್ಸಿಗಳ ನೇಮಕಾತಿ ಮಾಡಿ ಬಾವಿಗಳನ್ನು ಕೊರೆಯುವ ಕೆಲಸದಲ್ಲಿ ವಿಳಂಬವಾಗಿ ಉಂಟಾಯಿತು. ಈ ಏಜೆನ್ಸಿಗಳಿಗೆ ಕಾರ್ಯಾದೇಶಗಳನ್ನು ನೀಡಿದ್ದು, ಬಾವಿ ಕೊರೆಯುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಅನುಬಂಧ-1

ಗಂಗಾ ಕಲ್ಯಾಣ ಯೋಜನೆ

ಕ್ರ. ಸಂ	ಮತ ಕ್ಷೇತ್ರದ ಹೆಸರು	2000–2001		2001–2002		2002–2003	
		ಆಯ್ಕೆ ಮಾಡಿದ ಸಂಖ್ಯೆ	ಸಾಧನೆ	ಆಯ್ಕೆ ಮಾಡಿದ	ಸಾಧನೆ	ಆಯ್ಕೆ ಮಾಡಿದ	ಸಾಧನೆ
1	2	3	4	5	6	7	8
1	ಅಫಲಜಪೂರ	20	20	02	02	02	–
2	ಗುಲ್ಬರ್ಗಾ	–	–	–	–	–	–
3	ಜೇವರ್ಗಿ	10	10	02	02	03	–
4	ಚಿತ್ತಾಪೂರ	12	12	03	03	02	–
5	ಚಿಂಚೋಳ್ಳಿ	01	01	44	44	–	–
6	ಸೇಡಂ	01	01	02	02	02	02
7	ಆಳಂದ	–	–	02	–	02	–
8	ಶಹಾಪೂರ	–	–	02	02	02	–
9	ಯಾದಗಿರಿ	20	20	10	10	–	04
10	ಸುರಪೂರ	–	–	02	–	–	–
11	ಕಮಾಲಾಪೂರ	01	01	02	–	–	–
12	ಶಹಾಬಾದ್	06	06	02	02	02	–
13	ಗುರುಮಿಠಕಲ್	–	–	09	18	–	06
	ಒಟ್ಟು	**71**	**71**	**82**	**85**	**15**	**12**

ಕ್ರ. ಸಂ	ಮತ ಕ್ಷೇತ್ರದ ಹೆಸರು	ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ					
		2000–2001		2001–2002		2002–2003	
1	2	3	4	5	6	7	8
1	ಅಫಲಜಪೂರ	13	13	20	18	04	–
2	ಗುಲ್ಬರ್ಗಾ	11	11	20	14	01	01
3	ಜೇವರ್ಗಿ	03	03	20	19	04	–
4	ಚಿತ್ತಾಪೂರ	–	–	20	16	05	08
5	ಚಿಂಚೋಳ್ಳಿ	–	–	30	28	06	–
6	ಸೇಡಂ	11	11	20	19	04	06
7	ಆಳಂದ	21	21	20	–	05	01
8	ಶಹಾಪೂರ	–	–	20	19	05	01
9	ಯಾದಗಿರಿ	10	10	43	19	05	28
10	ಸುರಪೂರ	01	01	20	–	–	03
11	ಕಮಾಲಾಪೂರ	–	–	20	–	–	01
12	ಶಹಾಬಾದ್	–	–	20	17	–	07
13	ಗುರುಮಿಠಕಲ್	–	–	54	21	–	77
	ಒಟ್ಟು	**70**	**70**	**327**	**190**	**39**	**135**

ಅನುಬಂಧ-2

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಲ್ಲಿ 2000-2001, 2001-02, 2002-03 ನೇ ಸಾಲಿನಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳ ಹಾಗೂ ಕೊರೆದ ಕೊಳವೆ ಭಾವಿಗಳ ಕ್ಷೇತ್ರವಾರು ವಿವರಗಳ ತ:ಖ್ತೆ

2000-2001ನೇ ಸಾಲು

ಕ್ರ. ಸಂ.	ಕ್ಷೇತ್ರದ ಹೆಸರು	ಆಯ್ಕೆಯಾದ ಫಲಾನುಭವಿಗಳು		ಸಾಧನೆ		ಕೊರೆಯುವ ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ
		ಸಾಮೂಹಿಕ ಯೋಜನೆ	ವೈಯಕ್ತಿಕ ಯೋಜನೆಯಲ್ಲಿ	ಸಾಮೂಹಿಕ ಕೊಳವೆಬಾವಿ	ವೈಯಕ್ತಿಕ ಕೊಳವೆಬಾವಿ	
1	2	3	4	5	6	7
1	ಅಳಂದ	6	1	3	1	–
2	ಜೇವರ್ಗಿ	9	1	5	1	–
3	ಅಫಜಲ್‌ಪುರ	24	–	16	–	–
4	ಗುಲ್ಬರ್ಗಾ	6	–	4	–	–
5	ಚಿತ್ತಾಪುರ	–	3	–	3	–
	ಒಟ್ಟು	45	5	27	5	–
		2001-02ನೇ ಸಾಲು				
1	ಯಾದಗಿರಿ	–	10	–	10	–
2	ಅಳಂದ	–	4	–	4	–
3	ಗುಲ್ಬರ್ಗಾ	–	2	–	2	–
4	ಅಫ್‌ಜಲ್‌ಪುರ	6	3	4	3	–

1	2	3	4	5	6	7
5	ಜೇವರ್ಗಿ	3	6	2	6	–
6	ಶಹಪೂರ್	–	5	–	5	–
7	ಚಿತ್ತಾಪುರ	3	2	2	2	–
8	ಸೇಡಂ	–	1	–	1	–
	ಒಟ್ಟು	**12**	**33**	**8**	**33**	**–**
			2002–2003ನೇ ಸಾಲು			
1	ಚಿಂಚೋಳಿ	–	2	–	–	2
2	ಗುಲ್ಬರ್ಗಾ	–	–	–	–	–
3	ಶಹಬಾದ್	–	–	–	–	–
4	ಅಫ್‌ಜಲ್‌ಪುರ್	–	2	–	–	2
5	ಚಿತ್ತಾಪುರ	–	2	–	–	2
6	ಸೇಡಂ	–	1	–	–	1
7	ಜೇವರ್ಗಿ	–	3	–	1	2
8	ಗುರುಮಿಟ್ಟಲ್	–	–	–	–	1
9	ಯಾದಗೀರ್	–	2	–	1	1
10	ಶಹಪೂರ	–	2	–	–	2
11	ಸುರಪುರ	–	2	1	1	
12	ಕಮಲಾಪುರ	4	2	2	–	2
13	ಅಳಂದ	–	2	–	–	2
	ಒಟ್ಟು	**4**	**20**	**2**	**3**	**17**

ಅನುಬಂಧ

ಗಂಗಾ ಕಲ್ಯಾಣ ಯೋಜನೆ (ಸಾಮೂಹಿಕ) ಕ್ಷೇತ್ರವಾರು ವಿವರ : 2000-01

ಕ್ರ.ಸಂ	ಮತ ಕ್ಷೇತ್ರ	ಆಯ್ಕೆ ಸಂಖ್ಯೆ	ಸಾಧನೆ
1	ಅಫಲಜಪೂರ	07	07
2	ಜೇವರ್ಗಿ	04	04
3	ಗುಲ್ಬರ್ಗಾ	–	–
4	ಆಳಂದ	–	–
5	ಚಿಂಚೋಳ್ಳಿ	–	–
6	ಚಿತ್ತಾಪೂರ	–	–
7	ಶಹಾಬಾದ್	–	–
8	ಶಹಾಪೂರ	–	–
9	ಗುರುಮಿತ್ತಕಲ್	–	–
10	ಸೇಡಂ	–	–
11	ಯಾದಗಿರಿ	–	–
12	ಸೋರಪುರ	–	–
13	ಕಮಾಲಾಪೂರ	–	–
	ಒಟ್ಟು	**11**	**11**

ಗಂಗಾ ಕಲ್ಯಾಣ ಯೋಜನೆ ಕ್ಷೇತ್ರವಾರು ವಿವರ : 2001-02

ಕ್ರ.ಸಂ	ಮತ ಕ್ಷೇತ್ರ	ಸಾಮೂಹಿಕ		ವೈಯಕ್ತಿಕ	
		ಆಯ್ಕೆ ಸಂಖ್ಯೆ	ಸಾಧನೆ	ಆಯ್ಕೆ ಸಂಖ್ಯೆ	ಸಾಧನೆ
1	ಅಫಲಜಪೂರ	03	03	02	02
2	ಜೇವರ್ಗಿ	02	02	03	03
3	ಗುಲ್ಬರ್ಗಾ	–	–	–	–
4	ಆಳಂದ	–	–	04	04
5	ಚಿಂಚೋಳ್ಳಿ	–	–	–	–
6	ಚಿತ್ತಾಪೂರ	–	–	–	–
7	ಶಹಾಬಾದ್	–	–	–	–
8	ಶಹಾಪೂರ	02	02	01	01
9	ಗುರುಮಿತ್ತಕಲ್	–	–	–	–
10	ಸೇಡಂ	–	–	–	–
11	ಕಮಲಪೂರ	–	–	04	04
12	ಯಾದಗಿರಿ	–	–	–	–
13	ಸೋರಪುರ	–	–	–	–
	ಒಟ್ಟು	**07**	**07**	**14**	**14**

ಗಂಗಾ ಕಲ್ಯಾಣ ಯೋಜನೆ ಕ್ಷೇತ್ರವಾರು ವಿವರ : 2002-03

		ಸಾಮೂಹಿಕ		ವೈಯಕ್ತಿಕ	
ಕ್ರ.ಸಂ	ಮತ ಕ್ಷೇತ್ರ	ಆಯ್ಕೆ ಸಂಖ್ಯೆ	ಸಾಧನೆ	ಆಯ್ಕೆ ಸಂಖ್ಯೆ	ಸಾಧನೆ
1	ಅಫಲಜಪೂರ	02	02	04	04
2	ಜೇವರ್ಗಿ	02	02	06	06
3	ಗುಲ್ಬರ್ಗಾ	–	–	03	03
4	ಆಳಂದ	02	02	03	03
5	ಚಿಂಚೋಳ್ಳಿ	–	–	06	06
6	ಚಿತ್ತಾಪೂರ	–	–	04	04
7	ಶಹಾಬಾದ್	–	–	–	–
8	ಶಹಾಪೂರ	02	02	01	01
9	ಗುರುಮಿತ್ತಕಲ್	–	–	–	–
10	ಸೇಡಂ	–	–	01	01
11	ಕಮಾಲಾಪೂರ	–	–	–	–
12	ಯಾದಗಿರಿ	–	–	–	–
13	ಸೋರಪುರ	–	–	05	05
	ಒಟ್ಟು	**08**	**08**	**30**	**30**

	ಒಟ್ಟಾರೆ	
ವರ್ಷ	ಸಾಮೂಹಿಕ	ವೈಯಕ್ತಿಕ
2000-01	11	–
2001-02	07	14
2002-03	08	30
ಒಟ್ಟು	**26**	**44**

ಕರ್ನಾಟಕ ರಾಜ್ಯ ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರಿಗೆ ಬಾಕಿ ವೇತನ ಪಾವತಿಸುವುದು

3128 (3858) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿರುವ ಒಟ್ಟು ಸಿಬ್ಬಂದಿಯ ವಿವರಗಳನ್ನು ನೀಡುವುದು;

ಆ) ಈ ಸಿಬ್ಬಂದಿಗಳಲ್ಲಿ ಪಾವತಿಗಾಗಿ ಸಂಬಳ ಬಾಕಿ ಇರುವವರ ಹೆಸರುಗಳ ವಿವರಗಳನ್ನು ನೀಡುವುದು;

ಇ) ಎಷ್ಟು ತಿಂಗಳುಗಳಿಂದ ಈ ಸಿಬ್ಬಂದಿಗಳೊಂದಿಗೆ ಸಂಬಳದ ಹಣ ಪಾವತಿ ಬಾಕಿ ಇದೆ;

ಈ) ಈ ಸಂಬಳ ಬಾಕಿ ಪಾವತಿಯನ್ನು ಸರ್ಕಾರ ಯಾವಾಗ ಪಾವತಿಸುವುದು?

ಶ್ರೀ ವಸಂತ ವಿ ಸಾಲಿಯಾನ್ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) ವ್ಯವಸ್ಥಾಪಕ ನಿರ್ದೇಶಕರನ್ನು ಸೇರಿಸಿ ಒಟ್ಟು 227 ಜನ ಸೇವೆ ಸಲ್ಲಿಸುತ್ತಿದ್ದಾರೆ.

ಆ) ಎಲ್ಲಾ 227 ನೌಕರರಿಗೆ ಸಂಬಳ ಪಾವತಿಸಲು ಬಾಕಿಯಿದೆ. ನೌಕರರ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ)

ಸಂಬಳ ಪಾವತಿಸಲು ಬಾಕಿ ಇರುವ ಅವಧಿ	ನೌಕರರ ಸಂಖ್ಯೆ
1) 12/02 ರಿಂದ 06/03	113
2) 01/03 ರಿಂದ 06/03	07
3) 02/03 ರಿಂದ 06/03	01
4) 03/03 ರಿಂದ 06/03	09
5) 04/03 ರಿಂದ 06/03	42
6) 05/03 ರಿಂದ 06/03	43

ಈ) ನಿಗಮವು ಸಂಬಳ ಬಾಕಿಯನ್ನು ಪಾವತಿಸಬೇಕಾಗಿದೆ.

ವಿಧಾನ ಸಭೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3858 ರ ಅನುಬಂಧ–1

ನಿಗಮದಲ್ಲಿ ಸಂಬಳ ಬಾಕಿಯಿರುವ ಸಿಬ್ಬಂದಿಗಳ ಹೆಸರುಗಳು

ಕ್ರಮ ಸಂಖ್ಯೆ	ಹೆಸರು ಶ್ರೀಯುತ/ಶ್ರೀಮತಿ	ಸ್ಥಳ
1.	ಡಾ॥ ಎನ್ ಆರ್ ರಾಮಕೃಷ್ಣ	ಕೇಂದ್ರ ಕಛೇರಿ ಮಂಗಳೂರು
2.	ರಮೇಶ್ ಜಿಪ್ಪು	ಕೇಂದ್ರ ಕಛೇರಿ ಮಂಗಳೂರು
3.	ಯು.ಜೆ. ಕೇದಾರನಾಥ್	ಕೇಂದ್ರ ಕಛೇರಿ ಮಂಗಳೂರು
4.	ಮೋಹನ್ ಕೋಡಿಕಲ್	ಮಂಗಳೂರು
5.	ಪಿ.ಎಂ. ಮುದ್ದಣ್ಣ	ಮಲ್ಪೆ
6.	ಸಿ.ಎಂ. ಚೌಡಪ್ಪ	ಬೆಂಗಳೂರು